# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 952 |
| ಸದಸ್ಯರ ಹೆಸರು | ಶ್ರೀ ಎಂ ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 14.03.2025 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದ ಜನರಿಗೆ ವಿರಳ ಮತ್ತು ದುಬಾರಿ ವೆಚ್ಚದ ಚಿಕಿತ್ಸಾ ಸೇವೆಗಳನ್ನು ಒದಗಿಸಲು 35 ಕೋಟಿರೂ.ಗಳ Corpus Fund ಅನ್ನು ಸ್ಥಾಪಿಸಲಾಗುವುದು ಎಂದು ಈ ಹಿಂದೆ ಆಯವ್ಯಯದಲ್ಲಿ ಘೋಷಿಸಿದ್ದು, ಈ ಕಾರ್ಯ ಪೂರ್ಣಗೊಂಡಿದೆಯೇ; | ಹೌದು.<br>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದ ಜನರಿಗೆ ವಿರಳ ಮತ್ತು ದುಬಾರಿ ವೆಚ್ಚದ ಚಿಕಿತ್ಸಾ ಸೇವೆಗಳನ್ನು ಒದಗಿಸಲು Corpus Fund ಅನ್ನು ಸ್ಥಾಪಿಸಲಾಗಿರುತ್ತದೆ. |
| ಆ. | ಇದ್ದಲ್ಲಿ, ಎಷ್ಟು ರೋಗಿಗಳು ಈ ಯೋಜನೆಯ ಲಾಭವನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಿದ್ದಾರೆ ಮತ್ತು ಎಷ್ಟು ಫಲಾನುಭವಿಗಳು ಈ ಯೋಜನೆಯ ಲಾಭ ಪಡೆದಿದ್ದಾರೆ; | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದ ಜನರಿಗೆ ವಿರಳ ಮತ್ತು ದುಬಾರಿ ವೆಚ್ಚದ ಚಿಕಿತ್ಸಾ ಸೇವೆಗಳನ್ನು ಪಡೆಯಲು ಯಾವುದೇ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.<br>ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತಂತೆ ಸರ್ಕಾರದ ಆದೇಶ ಸಂಖ್ಯೆ: ಆಕುಕ 589 ಸಿಜಿಇ 2024, ದಿನಾಂಕ: 12.12.2024 ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದ ಜನರಿಗೆ ವಿರಳ ಮತ್ತು ದುಬಾರಿ ವೆಚ್ಚದ ಚಿಕಿತ್ಸಾ ಸೇವೆಗಳನ್ನು ಒದಗಿಸಲು 47 ಕೋಟಿರೂ.ಗಳ Corpus Fund ಅನ್ನು ಸೃಜಿಸಿ ಅದರ ಮೇಲೆ ಲಭ್ಯವಾಗಬಹುದಾದ ಬಡ್ಡಿಯ ಮೊತ್ತದಿಂದ ನಿಗದಿತ 17 ಚಿಕಿತ್ಸಾ ವಿಧಾನಗಳನ್ನು ಅರ್ಹ ಫಲಾನುಭವಿಗಳಿಗೆ ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ (ಆದೇಶದ ಪ್ರತಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ).<br>ಈ ಯೋಜನೆಯಡಿ ಚಿಕಿತ್ಸೆ ನೀಡುವ ಕುರಿತು ಈವರೆವಿಗೆ ಅರ್ಬುಧ ರೋಗಕ್ಕೆ (ಕ್ಯಾನ್ಸರ್) ಸಂಬಂಧಿಸಿದಂತೆ 12 Preauthಗಳ ಅನುಮೋದನೆಗಾಗಿ ಆಸ್ಪತ್ರೆಗಳಿಂದ ಸಲ್ಲಿಕೆಯಾಗಿದೆ. |
| ಇ. | ಸದರಿ corpus Fund ನಲ್ಲಿ ಹಣ ಬಾಕಿ ಉಳಿದಿದೆಯೇ; ಈ ಯೋಜನೆ ಕುರಿತು ಜಾಗೃತಿ ಮೂಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಸದರಿ corpus Fund ನಲ್ಲಿ ಸರ್ಕಾರದ ಆದೇಶಸಂ: ಆಕುಕ 589 ಸಿಜಿಇ 2024, ದಿನಾಂಕ: 12.12.2024 ರಂತೆ ರೂ. 47.00 ಕೋಟಿ ಮೊತ್ತ ಲಭ್ಯವಿರುತ್ತದೆ. **ಎಸ್‌ಸಿಪಿ/ಟಿಎಸ್‌ಪಿ ಯೋಜನೆಯು** ಕರ್ನಾಟಕ ಸರ್ಕಾರ/ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಅನುಷ್ಠಾನಗೊಂಡಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ PHH/NPHH ಕಾರ್ಡ್‌ಗಳ ಆರ್ಥಿಕ ಮಿತಿ ಪರಿಗಣಿಸದೇ ಸಂಪೂರ್ಣ ಉಚಿತ ಚಿಕಿತ್ಸೆ, ಹೃದ್ರೋಗ, ಕ್ಯಾನ್ಸರ್, |

| | | |
|---|---|---|
| | | ಮೂಳೆ ಮತ್ತು ಕೀಲು ವಿಭಾಗಗಳಲ್ಲಿ ಲಭ್ಯವಿರುವ ವಿಧಾನಗಳ ಬಗ್ಗೆ ಕೈಪಿಡಿ ಹಾಗೂ ಕರಪತ್ರಗಳನ್ನು ಸಿದ್ಧಪಡಿಸಿ ಜಿಲ್ಲಾ ಸಂಯೋಜಕರುಗಳು, ರಾಜ್ಯಾದಂತ ಸರ್ಕಾರಿ ಹಾಗೂ ಖಾಸಗಿ ನೊಂದಾಯಿತ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆರೋಗ್ಯ ಮಿತ್ರರುಗಳ ಮೂಲಕ ಹಂಚಿ, ಯೋಜನೆ ಕುರಿತು ವ್ಯಾಪಕ ಪ್ರಚಾರ ಕೈಗೊಳ್ಳಲಾಗಿದೆ. |

**ಆಕುಕ 45 ಎಸ್‌ಬಿವಿ 2025**

**(ದಿನೇಶ್ ಗುಂಡೂರಾವ್ )**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2024-25ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-168 ರ ಅನುಸಾರ ಕಾರ್ಪಸ್ ಫಂಡ್ ಸ್ಥಾಪಿಸಿ, ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದ ಜನರಿಗೆ ವಿರಳ ಮತ್ತು ಹೆಚ್ಚು ಚಿಕಿತ್ಸಾ ವೆಚ್ಚ ತಗಲುವ ಚಿಕಿತ್ಸಾ ಸೇವೆಗಳನ್ನು ಒದಗಿಸುವ ಬಗ್ಗೆ

**ಓದಲಾಗಿದೆ:**

1. 2024-25ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-168
2. ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: . FD 352/Exp-3/2024 ದಿನಾಂಕ:02.08.2024
3. ಸರ್ಕಾರದ ಆದೇಶ ಸಂಖ್ಯೆ:ಆಕುಕ 22 ಸಿಜಿಇ 2022, ದಿನಾಂಕ: 07.09.2022.
4. ಸರ್ಕಾರದ ಆದೇಶ ಸಂಖ್ಯೆ: ಆಕುಕ 332 ಸಿಜಿಇ 2024, ದಿನಾಂಕ: 01.07.2024
5. ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಇವರ ಏಕ-ಕಡತ ಸಂಖ್ಯೆ: SAST/MM/RARE/2/2024-MM SEC (1570718)

*****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1) ರ ಆಯವ್ಯಯ ಭಾಷಣದ ಕಂಡಿಕೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದ ಜನರಿಗೆ ವಿರಳ ಮತ್ತು ದುಬಾರಿ ವೆಚ್ಚದ ಚಿಕಿತ್ಸಾ ಸೇವೆಗಳನ್ನು ಒದಗಿಸಲು ರೂ.35 ಕೋಟಿಗಳ corpus fund ಅನ್ನು ಸ್ಥಾಪಿಸಲಾಗುವುದು. ಈ ನಿಧಿಯ ಬಡ್ಡಿ ಆಕರಣೆಯನ್ನು ರೋಗಿಗಳ ಚಿಕಿತ್ಸೆಯ ಅಗತ್ಯಕ್ಕನುಗುಣವಾಗಿ ನೀಡಲಾಗುವುದು ಎಂದು ಘೋಷಿಸಲಾಗಿದೆ.

ಬಜೆಟ್ ಘೋಷಣೆಯ ಪ್ರಕಾರ ಸಮಾಜ ಕಲ್ಯಾಣ ಇಲಾಖೆಯಿಂದ ಬಜೆಟ್ ಪ್ಯಾರಾವನ್ನು ಅನುಷ್ಠಾನಗೊಳಿಸಬೇಕಾಗಿತ್ತು. ಆದರೆ, ಮೇಲೆ ಓದಲಾದ ಕ್ರಮಾಂಕ (2)ರ ಹಿಂಬರಹದಲ್ಲಿ ಈ ಬಜೆಟ್ ಕಂಡಿಕೆಯನ್ನು ಕಾರ್ಯಗತಗೊಳಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯನ್ನು ನೋಡಲ್ ಇಲಾಖೆಯನ್ನಾಗಿ ಗೊತ್ತುಪಡಿಸಲಾಗಿದೆ.

ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ High Level ಸಮಿತಿ ಸಭೆ ನಡೆದಿದ್ದು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನಲ್ಲಿ SCSP/TSP ಅಡಿ ಪ್ರಸ್ತುತ ಈ ಕೆಳಕಂಡಂತೆ ಅನುದಾನ ಲಭ್ಯವಿರುವುದರಿಂದ ಸಭೆಯಲ್ಲಿ ಕಾರ್ಪಸ್‌ಫಂಡ್‌ರೂ. 47.00 ಕೋಟಿಗಳಿಗೆ ಪರಿಷ್ಕೃತವಾಗಿದೆ ಎಂದು ನಿರ್ಣಯಿಸಲಾಗಿದೆ.

| Sl.no | Budget Released | SCP | TSP | |
|---|---|---|---|---|
| 1 | 2021-22 | 22,15,53,000 | 12,99,38,000 | 35,14,91,000 |
| 2 | 2022-23 | - | - | - |
| 3 | 2023-24 | 9,10,73,000 | 4,00,08,000 | 13,10,81,000 |
| **Total** | | **31,26,26,000** | **16,99,46,000** | **48,25,72,000** |
| **Expenditure** | | 97,01,000 | 21,50,000 | **1,18,51,000** |
| **Available Balance** | | **30,29,25,000** | **16,77,96,000** | **47,07,21,000** |


ile No. HFW/45/SBV/2025-HEALTH 2-HEALTH AND FAMILY WELFARE SEC (Computer No. 1711400)
Scanned with OKEN Scanner

ಮೇಲೆ ಓದಲಾದ ಕ್ರಮಾಂಕ (3)ರ ಆದೇಶದಲ್ಲಿ ಆಯುಷ್ಮಾನ್ ಭಾರತ್- ಆರೋಗ್ಯ ಕರ್ನಾಟಕ ಯೋಜನೆಯಡಿ ಸೇರದೇ ಇರುವ ವಿರಳ ಖಾಯಿಲೆಗಳ ಚಿಕಿತ್ಸಾ ವೆಚ್ಚ ಹಾಗೂ ಹೆಚ್ಚು ಚಿಕಿತ್ಸಾ ವೆಚ್ಚ ತಗಲುವ **08 ಖಾಯಿಲೆಗಳ ಚಿಕಿತ್ಸಾ ವಿಧಾನವನ್ನು ಗುರುತಿಸಿ**, ಸದರಿ ಚಿಕಿತ್ಸಾ ವಿಧಾನಗಳಿಗೆ ವೆಚ್ಚವನ್ನು ನಿಗದಿಪಡಿಸಿ, unspent SCSP/TSP ಅನುದಾನವನ್ನು ಭರಿಸಿಕೊಳ್ಳುವಂತೆ ಸೂಚಿಸಲಾಗಿದೆ. ಸದರಿ ಯೋಜನೆಯನ್ನು ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ (IGICH), ಕಿದ್ವಾಯಿ, ನಾರಾಯಣ ಹೃದಯಾಲಯ ಹಾಗೂ ರಾಮಯ್ಯ ಆಸ್ಪತ್ರೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಮುಂದುವರೆದು, ಮೇಲೆ ಓದಲಾದ ಕ್ರಮಾಂಕ (4)ರ ಆದೇಶದಲ್ಲಿ ಒಟ್ಟು 25 ವಿರಳ ಮತ್ತು ದುಬಾರಿ ವೆಚ್ಚದ ಖಾಯಿಲೆಗಳಿಗೆ ಚಿಕಿತ್ಸಾ ವಿಧಾನಗಳನ್ನು ಗುರುತಿಸಿ, ಚಿಕಿತ್ಸಾ ವೆಚ್ಚವನ್ನು unspent SCSP/TSP ಅನುದಾನದಲ್ಲಿ ಭರಿಸಿಕೊಳ್ಳಲು ಅನುಮೋದನೆ ನೀಡಲಾಗಿದೆ. ಆದರೆ, ಇನ್ನೂ ಸದರಿ ಆದೇಶವು ಅನುಷ್ಠಾನಗೊಳ್ಳಬೇಕಾಗಿರುತ್ತದೆ.

ಅಸ್ತಿತ್ವದಲ್ಲಿರುವ ಸದರಿ ಯೋಜನೆಯನ್ನು ಸುವರ್ಣ ಆರೋಗ್ಯ ಟ್ರಸ್ಟ್ ಮುಖಾಂತರ ಅನುದಾನ ಆಧರಿತ ಯೋಜನೆಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸ್ತುತ ಬಜೆಟ್‌ಘೋಷಣೆಯ ಅನುಸಾರ ಸದರಿ ಯೋಜನೆಯನ್ನು ಕಾರ್ಪಸ್ ಫಂಡ್ ಆಧರಿತ ಯೋಜನೆಯಾಗಿ ಪರಿವರ್ತಿಸಲು ಯೋಜಿಸಲಾಗಿದೆ. ಅಂದರೆ, ವಿರಳ ಮತ್ತು ದುಬಾರಿ ವೆಚ್ಚದ ಖಾಯಿಲೆಗಳ ಚಿಕಿತ್ಸಾ ವೆಚ್ಚವನ್ನು ಕಾರ್ಪಸ್ ಫಂಡ್‌ನಿಂದ ಬರುವ ಬಡ್ಡಿಯಿಂದ ಭರಿಸಲು ಉದ್ದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (5)ರ ಏಕ-ಕಡದಲ್ಲಿ, ಪ್ರಸ್ತುತ 8 ಚಿಕಿತ್ಸಾ ವಿಧಾನಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಉಳಿದ 25 ಚಿಕಿತ್ಸಾ ವಿಧಾನಗಳು ಅನುಷ್ಠಾನಕ್ಕೆ ಬಾಕಿಯಿರುತ್ತವೆ. ಸದರಿ 8 ಚಿಕಿತ್ಸಾ ವಿಧಾನಗಳ ವಾರ್ಷಿಕ ಅಂದಾಜು ವೆಚ್ಚವು ರೂ. 1.18 ಕೋಟಿಗಳಷ್ಟಿರುತ್ತದೆ. ಮುಂದುವರೆದು, ಉಳಿದ 25 ಚಿಕಿತ್ಸಾ ವಿಧಾನಗಳು ಜಾರಿಗೆ ಬಂದಲ್ಲಿ ಅಂದಾಜು ವಾರ್ಷಿಕ ವೆಚ್ಚ ರೂ.18-19 ಕೋಟಿಗಳಿಗೆ ಏರಬಹುದು ಎಂದು ನಿರೀಕ್ಷಿಸಲಾಗಿದೆ. ಆದ್ದರಿಂದ, ಪರಿಶಿಷ್ಟ ಜಾತಿ/ಪಂಗಡದ ಅನುದಾನದಡಿಯಲ್ಲಿನ ಕಾರ್ಪಸ್ ಫಂಡ್ ಬಡ್ಡಿಯಿಂದ ಈ 8+25 ಚಿಕಿತ್ಸಾ ವಿಧಾನಗಳಿಗೆ ವೆಚ್ಚ ಭರಿಸುವುದು ಆರ್ಥಿಕವಾಗಿ ಕಷ್ಟಸಾಧ್ಯವಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಕಾರ್ಪಸ್ ಫಂಡ್‌ನಿಂದ ಲಭ್ಯವಿರುವ ಬಡ್ಡಿಯೊಳಗೆ ಪ್ರಸ್ತಾವಿತ ಯೋಜನೆಗೆ ಅವಕಾಶ ಕಲ್ಪಿಸಲು ಈ ಕೆಳಗಿನ ಅಂಶಗಳನ್ನು ಪ್ರಸ್ತಾಪಿಸಲಾಗಿದೆ:

**ಅ)** ವಿರಳ ಕಾಯಿಲೆಗಳ ಚಿಕಿತ್ಸೆ: ವಿರಳ ಕಾಯಿಲೆಗಳ ಚಿಕಿತ್ಸೆಯನ್ನು ಈ ಹಿಂದೆ ಅಸ್ತಿತ್ವದಲ್ಲಿರುವ ಯೋಜನೆಯಲ್ಲಿ ಸೇರಿಸಲಾಗಿತ್ತು. ಆದರೆ ಈಗ ಕೇಂದ್ರ ಸರ್ಕಾರದ ನಿಧಿಯ NPRD ಯೋಜನೆಯಡಿ ಎಲ್ಲಾ ವರ್ಗದ ವ್ಯಕ್ತಿಗಳಿಗೆ ಗರಿಷ್ಟ ರೂ. 50.00 ಲಕ್ಷದ ಮಿತಿಯೊಳಗೆ ಎಲ್ಲಾ ವಿರಳ ಕಾಯಿಲೆಗಳ ಚಿಕಿತ್ಸೆ ಒಳಗೊಂಡಿರುತ್ತದೆ.ಆದ್ದರಿಂದ, ರಾಜ್ಯ ಬಜೆಟ್ ಅಡಿಯಲ್ಲಿ ವಿರಳ ಕಾಯಿಲೆಗಳಿಗೆ ಪ್ರತ್ಯೇಕ ಯೋಜನೆ ಅಗತ್ಯವಿಲ್ಲ.

**ಆ)** ಮುಂದುವರೆದು, ದುಬಾರಿ ವೆಚ್ಚದ ಕೆಲವು ರೋಗಗಲು ರಾಜ್ಯ ಸರ್ಕಾರದ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ, ಜೀವ ಸಾರ್ಥಕತೆ ಇತ್ಯಾದಿ ಯೋಜನೆಗಳಡಿಯಲ್ಲಿ ಒಳಗೊಂಡಿವೆ. ಆದ್ದರಿಂದ ಪ್ರಸ್ತಾವಿತ ಯೋಜನೆಯಿಂದ ಇವುಗಳನ್ನು ಹೊರಗಿಡಲು ಪ್ರಸ್ತಾಪಿಸಲಾಗಿದೆ. ಏಕೆಂದರೆ ಇವೆಲ್ಲವೂ ಪರಿಶಿಷ್ಟ ಜಾತಿ / ಪಂಗಡದ ಕುಟುಂಬಗಳು ಸೇರಿದಂತೆ ಎಲ್ಲಾ ವರ್ಗದವರಿಗೆ ಲಭ್ಯವಿರುತ್ತವೆ. ಆದ್ದರಿಂದ, ದಿನಾಂಕ: 07.09.2022 ರ ಆದೇಶದಲ್ಲಿ ಅನುಮೋದನೆಯಾಗಿರುವ 8 ಚಿಕಿತ್ಸಾ ವಿಧಾನಗಳಲ್ಲಿ 6 ಚಿಕಿತ್ಸಾ ವಿಧಾನಗಳನ್ನು ಕೈ ಬಿಟ್ಟು, 2 ಚಿಕಿತ್ಸಾ ವಿಧಾನಗಳನ್ನು ಹಾಗೂ ದಿನಾಂಕ: 01.07.2024ರ ಆದೇಶದಲ್ಲಿ ಅನುಮೋದನೆಯಾಗಿರುವ 25 ಚಿಕಿತ್ಸಾ ವಿಧಾನಗಳಲ್ಲಿ 10 ಚಿಕಿತ್ಸಾ ವಿಧಾನಗಳನ್ನು ಕೈ ಬಿಟ್ಟು, 15 ಚಿಕಿತ್ಸಾ ವಿಧಾನಗಳನ್ನು ಅಂದರೆ ಒಟ್ಟು 17 ಚಿಕಿತ್ಸಾ ವಿಧಾನಗಳನ್ನು ಮುಂದುವರಸಲು ಉದ್ದೇಶಿಸಲಾಗಿರುತ್ತದೆ.



File No. HFW/45/SBV/2025-HEALTH 2-HEALTH AND FAMILY WELFARE SEC (Computer No. 1711400)
Scanned with OKEN Scanner

ಇ) ಮುಂದುವರೆದು, ಮೇಲಿನ ಪ್ರಸ್ತಾವನೆಯಲ್ಲಿನ ಚಿಕಿತ್ಸಾ ವಿಧಾನಗಳನ್ನು ಸುವರ್ಣ ಆರೋಗ್ ಸುರಕ್ಷಾ ಟ್ರಸ್ಟ್‌ನಿಂದ ಅನುಷ್ಠಾನಗೊಳಿಸಲಾಗುತ್ತಿರುವ ಯಾವುದಾದರೂ ಯೋಜನೆಯಡಿಯಲ್ಲಿ ಅಥವಾ ಕೇಂದ್ರ ಸರ್ಕಾರದ NPRD ಯೋಜನೆಯಡಿಯಲ್ಲಿ ಸೇರ್ಪಡೆ ಮಾಡಿದಲ್ಲಿ ಅವುಗಳನ್ನು SCSP/TSP ಅಡಿಯ ಕಾರ್ಪಸ್ ಫಂಡ್ ಯೋಜನೆ ಅಡಿಯಿಂದ ಕೈಬಿಡಲು ಉದ್ದೇಶಿಸಲಾಗಿದೆ.

ಅರ್ಹ ಚಿಕಿತ್ಸಾ ಕಾರ್ಯವಿಧಾನಗಳಲ್ಲಿನ ಬದಲಾವಣೆಯಿಂದಾಗಿ, ಪ್ರಸ್ತಾಪಿತ ಯೋಜನೆಯನ್ನು SCSP/TSP ಅಡಿಯ ಕಾರ್ಪಸ್ ಫಂಡ್ ಮೇಲಿನ ಬಡ್ಡಿಯಿಂದ ಅನುಷ್ಠಾನಗೊಳಿಸಲು ಆರ್ಥಿಕವಾಗಿ ಅನುಕೂಲಕರವಾಗಿರುತ್ತದೆ ಮತ್ತು ಯೋಜನೆಯನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದ ವರ್ಗದವರಿಗೆ ಮಾತ್ರ ಲಭ್ಯಪಡಿಸಲು ಅನುವಾಗುತ್ತದೆ ಹಾಗೂ ಎಂಪನೆಲ್ಡ್ ಆಸ್ಪತ್ರೆಗಳ ಮೂಲಕವೇ SAST ಕಾರ್ಯ ನಿರ್ವಹಿಸುತ್ತಿರುವುದರಿಂದ ಉದ್ದೇಶಿತ ಯೋಜನೆಯಲ್ಲಿ ಎಂಪನೆಲ್ ಮಾಡದ ಆಸ್ಪತ್ರೆಗಳಿಗೆ ಚಿಕಿತ್ಸಾ ವೆಚ್ಚವನ್ನು ಅನುಮತಿಸುವುದು ಕಾರ್ಯಸಾಧ್ಯವಲ್ಲದ ಕಾರಣ, ಈ ಅಂಶವನ್ನು ಹೊರತುಪಡಿಸಿ, ಉಳಿದ ಅಂಶಗಳನ್ನು ಅನುಸರಿಸಬಹುದಾಗಿರುವುದರಿಂದ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 589 ಸಿಜಿಇ 2024**
**ಬೆಂಗಳೂರು, ದಿನಾಂಕ: 12.12.2024**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2024-25ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-168 ರ ಅನುಸಾರ ಕಾರ್ಪಸ್ ಫಂಡ್ ಸ್ಥಾಪಿಸಿ, ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದ ಜನರಿಗೆ ವಿರಳ ಮತ್ತು ಹೆಚ್ಚು ಚಿಕಿತ್ಸಾ ವೆಚ್ಚ ತಗಲುವ ಚಿಕಿತ್ಸಾ ಸೇವೆಗಳನ್ನು ಒದಗಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ಅನುಮೋದನೆ ನೀಡಿ ಆದೇಶಿಸಿದೆ.

**ಅ)** ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟನ SCSP/TSP ಅಡಿಯಲ್ಲಿ ಪ್ರಸ್ತುತ ಲಭ್ಯವಿರುವ ರೂ. 47.00 ಕೋಟಿಗಳ ಕಾರ್ಪಸ್ ಫಂಡ್‌ನ್ನು ಸೃಜಿಸಿ, ಅದರ ಮೇಲ ಲಭ್ಯವಾಗಬಹುದಾದ ಬಡ್ಡಿಯ ಮೊತ್ತದಿಂದ ಸರ್ಕಾರವು ಪ್ರಸ್ತುತ ಅನುಮೋದಿಸಿರುವ SCP/TSP ಯೋಜನೆಯಡಿ ಒಟ್ಟಾರೆ 33 ವಿರಳ ಖಾಯಿಲೆಗಳ ಚಿಕಿತ್ಸಾ ವಿಧಾನಗಳಲ್ಲಿ [ಸರ್ಕಾರದ ಆದೇಶ ಸಂಖ್ಯೆ: ಆಕುಕ 22 ಸಿಜಿಇ 2022, ದಿನಾಂಕ: 07.09.2022 ರಲ್ಲಿನ 8 ವಿರಳ ಹಾಗೂ ದುಬಾರಿ ವೆಚ್ಚದ ಚಿಕಿತ್ಸೆಗಳು ಮತ್ತು ಸರ್ಕಾರದ ಆದೇಶ ಸಂಖ್ಯೆ: ಆಕುಕ 332 ಸಿಜಿಇ 2024, ದಿನಾಂಕ: 01.07.2024 ರಲ್ಲಿನ 25 ವಿರಳ ಮತ್ತು ದುಬಾರಿ ವೆಚ್ಚದ ಚಿಕಿತ್ಸೆಗಳು] ಈಗಾಗಲೇ ಭಾರತ ಸರ್ಕಾರದ National Policy for Rare Diseases (NPRD), ರಾಜ್ಯ ಸರ್ಕಾರದ ಆಯುಷ್ಮಾನ್ ಭಾರತ್ - ಆರೋಗ್ಯ ಕರ್ನಾಟಕ, ಜೀವ ಸಾರ್ಥಕತೆ ಇತ್ಯಾದಿ ಯೋಜನೆಗಳಲ್ಲಿ ಚಿಕಿತ್ಸೆಗಳನ್ನು ಒದಗಿಸಲಾಗುತ್ತಿರುವುದರಿಂದ, 16 ಚಿಕಿತ್ಸಾ ವಿಧಾನಗಳನ್ನು ಕೈಬಿಟ್ಟು, ಈ ಆದೇಶದೊಂದಿಗೆ ಲಗತ್ತಿಸಿದ **ಅನುಬಂಧದಲ್ಲಿ ವಿವರಿಸಿರುವಂತೆ** ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೋಗಿಗಳ 17 ಚಿಕಿತ್ಸಾ ವಿಧಾನಗಳ ವಿರಳ ಮತ್ತು ದುಬಾರಿ ವೆಚ್ಚದ ಖಾಯಲೆಗಳ ಚಿಕಿತ್ಸಾ ವೆಚ್ಚವನ್ನು ಭರಿಸುವುದು. ಮುಂದುವರೆದು, ಮೇಲ್ಕಂಡ ಎರಡು ಸರ್ಕಾರಿ ಆದೇಶಗಳಲ್ಲಿನ ಇತರ ಎಲ್ಲಾ ಅಂಶಗಳನ್ವಯ ಈ ಯೋಜನೆಯನ್ನು ಮುಂದುವರೆಸಿ ಅನುಷ್ಠಾನಗೊಳಿಸುವುದು.

ಆ) ಭವಿಷ್ಯದಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರದ ಯಾವುದೇ ಯೋಜನೆಗಳ ಅಡಿಯಲ್ಲಿ ಇಡೀ ಜನಸಂಖ್ಯೆಗೆ ಅನ್ವಯವಾಗುವಂತೆ ಪ್ರಸ್ತಾಪಿತ 17 ಚಿಕಿತ್ಸಾ ವಿಧಾನಗಳಲ್ಲಿ ಯಾವುದಾದರೂ ಒಂದನ್ನು ಸೇರಿಸಿದರೆ, ಅವುಗಳನ್ನು ಸದರಿ ಯೋಜನೆಯಡಿಯಿಂದ ಕೈ ಬಿಡಲು ಸರ್ಕಾರದ ಅನುಮೋದನೆ ಪಡೆಯುವುದು.



File No. HFW/45/SBV/2025-HEALTH 2-HEALTH AND FAMILY WELFARE SEC (Computer No. 1711400)
Scanned with OKEN Scanner
Generated from eOffice by BHAVANA B H, HFW-ASST2(BH)-HEALTH2, ASSISTANT 2, HEALTH AND FAMILY WELFARE SEC

ಮುಂದುವರೆದು, ವಿರಳ ಮತ್ತು ದುಬಾರಿ ವೆಚ್ಚದ ಖಾಯಿಲೆಗಳಿಗೆ ಹೆಚ್ಚುವರಿ ಕಾರ್ಯ ವಿಧಾನಗಳನ್ನು ಸೇರ್ಪಡೆ ಮಾಡಲು ಹಾಗೂ ಈಗಾಗಲೇ ಇರುವ ಕಾರ್ಯ ವಿಧಾನಗಳಿಗೆ ಮಾರ್ಗಸೂಚಿಗಳನ್ನು ನೀಡಲು ಅಸ್ತಿತ್ವದಲ್ಲಿರುವ ತಾಂತ್ರಿಕ ಸಮಿತಿ ಹಾಗೂ ದಿನಾಂಕ: 21.10.2022 ರಂದು ನಡೆದ 32ನೇ ಕಾರ್ಯಕಾರಿ ಸಮಿತಿ ಸಭೆಯಲ್ಲಿ ರಚಿಸಲಾಗಿರುವ ಕಾರ್ಯಕಾರಿ ಸಮಿತಿ ಸೇರಿದಂತೆ ಎರಡು ಸಮಿತಿಗಳು ಪ್ರಸ್ತಾಪಿತ ಕಾರ್ಪಸ್ ಫಂಡ್ ಯೋಜನೆಯಡಿಯಲ್ಲಿ ಮುಂದುವರೆಯತಕ್ಕದ್ದು.

**ಈ ಆದೇಶವನ್ನು ಆರ್ಥಿಕ ಇಲಾಖೆ ಹಿಂಬರಹ ಸಂಖ್ಯೆ: ಆಇ 673 ವೆಚ್ಚ-5/2024, ದಿನಾಂಕ: 26.11.2024, ಯೋಜನಾ ಇಲಾಖೆಯ ಹಿಂಬರಹ ಸಂಖ್ಯೆ: PDS-MED/98/2024 ರಲ್ಲಿನ ಸಹಮತಿ ಹಾಗೂ ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ 696/2024 ರಲ್ಲಿನ ಅನುಮೋದನೆಯನುಸಾರ ಹೊರಡಿಸಲಾಗಿದೆ.**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಪದ್ಮ.ವಿ)** 12/12/2024
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ಆರೋಗ್ಯ 1&2)

**<u>ಇವರಿಗೆ:-</u>**

1. ಪ್ರಧಾನ ಮಹಾಲೇಖಪಾಲರು (ಜಿ &ಎಸ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಕುಷ್ಟರೋಗ ಆಸ್ಪತ್ರೆ ಆವರಣ, ಮಾಗಡಿ ರಸ್ತೆ, ಬೆಂಗಳೂರು.
4. ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಆರೋಗ್ಯ ಸೌಧ, ಕುಷ್ಟರೋಗ ಆಸ್ಪತ್ರೆ ಆವರಣ, ಮಾಗಡಿ ರಸ್ತೆ, ಬೆಂಗಳೂರು.
5. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಕುಷ್ಟರೋಗ ಆಸ್ಪತ್ರೆ ಆವರಣ, ಮಾಗಡಿ ರಸ್ತೆ, ಬೆಂಗಳೂರು.
6. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
7. ಸರ್ಕಾದರ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ,ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
8. ಸರ್ಕಾರದ ಅಪರ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನಸೌಧ, ಬೆಂಗಳೂರು (ಸಚಿವ ಸಂಪುಟ ನಿರ್ಣಯ ಸಂಖ್ಯೆ: ಸಿ 696/2024)
9. ಸರ್ಕಾರದ ಕಾರ್ಯದರ್ಶಿ, ಯೋಜನಾ ಇಲಾಖೆ, ಇವರ ಆಪ್ತ ಕಾರ್ಯದರ್ಶಿ, ಬಹು ಮಹಡಿಗಳ ಕಟ್ಟಡ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-5), ವಿಧಾನಸೌಧ, ಬೆಂಗಳೂರು.
11. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

**<u>ಪ್ರತಿ ಮಾಹಿತಿಗಾಗಿ:</u>**

1. ಮಾನ್ಯ ಮುಖ್ಯ ಮಂತ್ರಿಗಳ ಅಪರ ಮುಖ್ಯ ಕಾರ್ಯಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು


Scanned with OKEN Scanner

3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತಕಾರ್ಯದರ್ಶಿ, ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು
4. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು



File No. HFW/45/SBV/2025-HEALTH 2-HEALTH AND FAMILY WELFARE SEC (Computer No. 1711400)
Scanned with OKEN Scanner

**ಆದೇಶ ಸಂಖ್ಯೆ: ಆಕುಕ 589 ಸಿಜಿಇ 2024, ದಿನಾಂಕ: 12.12.2024 ಕ್ಕೆ ಲಗತ್ತಿಸಲಾದ ಅನುಬಂಧ**

**Total 17 procedures retained under Rare and High Cost diseases are as below**

| SL.No | Procedure | Rate approved under Rare and High Cost scheme | Availability in any of the State scheme | Justification for inclusion or exclusion under Rare and High Cost Disease Scheme |
|---|---|---|---|---|
| 1 | Bone Marrow Transplant Autologous | 7,00,000/- | Available under HBP 2022 at the cost 6,00,000/-. Not available under AB-PMJAY CM's ArK scheme/ Organ transplant scheme/ NPRD. | Currently not available under any of the other State scheme, hence autologous BMT may be **retained** |
| 2 | PET Scan | 10,000/- | Not available under AB-PMJAY CM's ArK scheme/ Organ transplant scheme/ NPRD | Available in HBP 2022 at the rate of Whole body- 23600, Brain-16900, Gallium 68 Peptide-17000, Cardiac- 1700 and not in other State schemes. Hence, may be **retained at Rs.10,000 approved** rate only due to availability of limited resources. |
| 3 | Coronary Angiogram/Peripheral angiogram | 5,000/- | Not available under AB-PMJAY CM's ArK scheme/ Organ transplant scheme/ NPRD | Currently not available under any of the other State scheme however mapped at HBP 2022 at the cost of 10,500/-, hence may be **retained** |
| 4 | Drug Eluting Balloon for In-stent restenosis (ISR) | 35,000/- | Not available under AB-PMJAY CM's ArK scheme/ Organ transplant scheme/ NPRD | Currently not available under any of the other State scheme, hence may be **retained** |
| 5 | Intravascular Lithotripsy (IVL procedure + Angioplasty and Stenting) | 3,25,000/- | Not available under AB-PMJAY CM's ArK scheme/ Organ transplant scheme/ NPRD | Currently not available under any of the other State scheme, hence may be **retained** |
| 6 | Implantable cardioverter-defibrillator (ICD) Implantation (Single Chamber) | Implantation charges Rs. 46,000 + cost of ICD Rs. 1,96,880/- | Not available under AB-PMJAY CM's ArK scheme/ Organ transplant scheme/ NPRD | Currently not available under any of the other State scheme, hence may be **retained** |
| 7 | Implantable cardioverter-defibrillator (ICD) Implantation (Dual Chamber) | Implantation charges Rs. 46000 + cost of ICD Rs. 4,20,000/- | Not available under AB-PMJAY CM's ArK scheme/ Organ transplant scheme/ NPRD | Currently not available under any of the other State scheme, hence may be **retained** |
| 8 | Cardiac Resynchronization Therapy Pacemaker (CRT – P) Implantation | Implantation charges Rs. 46,000 + cost of CRT-P Rs. 2,18,400/- | Not available under AB-PMJAY CM's ArK scheme/ Organ transplant scheme/ NPRD | Currently not available under any of the other State scheme, hence may be **retained** |
| 9 | Cardiac Resynchronization | Implantation charges Rs. | Not available under AB-PMJAY CM's ArK | Currently not available under any of the other State scheme, hence |



File No. HFW/45/SBV/2025-HEALTH 2-HEALTH AND FAMILY WELFARE SEC (Computer No. 1711400)
Scanned with OKEN Scanne
Generated from eOffice by BHAVANA B H, HEW-ASST2(BH), HEALTH2, ASSISTANT 2, HEALTH AND FAMILY WELFARE SEC

| | | | | |
|---|---|---|---|---|
| | Therapy Defibrillator(CRT – D) Implantation | 46,000/-+ cost of CRT-P Rs. 5,48,800/- | scheme/ Organ transplant scheme/ NPRD | may be **retained** |
| 10 | Peripheral Angioplasty with DCB (Drug Coated Balloon) | 75,000/- | Not available under AB-PMJAY CM's ArK scheme/ Organ transplant scheme/ NPRD | Currently not available under any of the other State scheme however mapped at HBP 2022 at the cost of 72,800/-, hence may be **retained** |
| 11 | Ventricular Septal Rupture Repair (VSR) (Post MI) | 95,000/- | Not available under AB-PMJAY CM's ArK scheme/ Organ transplant scheme/ NPRD | Currently not available under any of the other State scheme, hence may be **retained** |
| 12 | Peripheral Venous Intravascular Ultrasound Procedure (IVUS) | 35,000/- | Not available under AB-PMJAY CM's ArK scheme/ Organ transplant scheme/ NPRD | Currently not available under any of the other State scheme, hence may be **retained** |
| 13 | High-Cost Chemotherapy | Capped to a maximum of 2,00,000/- per cycle (maximum 6 cycles per year) | Not available under AB-PMJAY CM's ArK scheme/ Organ transplant scheme/ NPRD | Currently not available under any of the other State scheme, hence may be **retained** |
| 14 | Unspecified Chemo Regimen/ High-Cost drugs | Up to 20,000/- per admission | Not available under AB-PMJAY CM's ArK scheme/ Organ transplant scheme/ NPRD | Currently not available under any of the other State scheme, hence may be **retained** |
| 15 | Optical Coherence Tomography (OCT) | 60,000/- | Not available under AB-PMJAY CM's ArK scheme/ Organ transplant scheme/ NPRD | Currently not available under any of the other State scheme, hence may be **retained** |
| 16 | High –Cost Procedures under Orthopaedics/ Neurosurgery/ Polytrauma /General Surgery | Up to 3,00,000/- per admission | Not available under AB-PMJAY CM's ArK scheme/ Organ transplant scheme/ NPRD | Currently not available under any of the other State scheme, hence may be **retained** |
| 17 | Brachial Artery Axillary Vein Graft (6X30 PTFE) Dialysis patient | 65000/- | Not available under AB-PMJAY CM's ArK scheme/ Organ transplant scheme/ NPRD | Currently not available under any of the other State scheme however mapped at HBP 2022 at the cost of 37500/-, hence may be **retained** |

12/12/2024



e No. HFW/45/SBV/2025-HEALTH 2-HEALTH AND FAMILY WELFARE SEC (Computer No. 1711400)
Scanned with OKEN Scanner